# ಕೊಂಚವೂ ಹಮ್ಮಿರದ ಕುಂಚಸಾಧಕ

# ಕೆ.ಎಲ್. ಭಟ್ಟ



ಕಲೆಯ ಪರಿಚಾರಿಕೆಯೇ ಬದುಕಿನ ಧ್ಯೇಯ ಅನ್ನುವ ಹಾಗೆ ತಮ್ಮಷ್ಟಕ್ಕೆ ತಾವು ಬದುಕಿದ್ದವರು ಕೆ.ಎಲ್. ಭಟ್ಟರು. ಕಳೆದ ಏಪ್ರಿಲ್ 15ರಂದು, 'ವಿಶ್ವ ಕಲಾದಿನ'ದಂದೇ ತಮ್ಮ ಬದುಕಿನ ಕಲಾಕೃತಿಯನ್ನು ಮುಗಿಸಿ ನಿರ್ಗಮಿಸಿರುವ ಭಟ್ಟರು ಸಾವಿರಾರು ವಿದ್ಯಾರ್ಥಿಗಳ ಮೂಲಕ ಕಲಾಜಗತ್ತಿನಲ್ಲಿ ಬಹುಕಾಲ ಜೀವಂತ ಇರುವಂಥವರು.

■ ವಿಶ್ವನಾಥ ಎ.ಎಸ್.

ಶ್ರೇಷ್ಠ ಕಲಾಕಾರ, ಅಪ್ರತಿಮ ಕಲಾವಿದ, ಕುಂಚಬ್ರಹ್ಮ, ಮಹಾನ್ ಕಲಾಗುರು – ಇತ್ಯಾದಿ ಇತ್ಯಾದಿ ಪದಗಳೆಲ್ಲಾ ಅವರ ಎದುರು ಬಂದಾಗ ಲೊಳಲೊಟ್ಟೆಗಳೆನಿಸಿ ನಗ್ನಗೊಳ್ಳಬಹುದಾದ ಅತ್ಯಂತ ಸರಳ ವ್ಯಕ್ತಿತ್ವ ಅವರದ್ದು. ಪ್ರಾಯಶಃ 'ಕಲೆ'ಗಿಂತ ತಾನು ಒಂದಂಗುಲ ಕೆಳಗೆ ಎಂಬುದನ್ನು ವಿನಯದಿಂದ ಭಾವಿಸಿ ಬದುಕಿ ತೋರಿಸಿದವರು ಕೆಮ್ಮಣ್ಣು ಲಕ್ಷ್ಮಣ ಭಟ್ಟರು.

ಸೃಜನಶೀಲ ಜಗತ್ತಿಗೆ ಕಾರಂತ, ಹೆಬ್ಬಾರ್, ಜಿ.ಎಸ್. ಶೆಣೈ ಅವರಂಥ ಮೇರು ಪ್ರತಿಭೆಗಳನ್ನು ನೀಡಿದ ಉಡುಪಿಯೇ ಕೆ.ಎಲ್. ಭಟ್ಟರಿಗೂ ಜನ್ಮಭೂಮಿ. 1941ರ ಮಾರ್ಚ್ 22ರಂದು ಉಡುಪಿಯ ಕೆಮ್ಮಣ್ಣಿನಲ್ಲಿ ರಾಜಗೋಪಾಲ ಭಟ್ಟ ಮತ್ತು ಸೀತಮ್ಮರಿಗೆ ಜನಿಸಿದ ಲಕ್ಷ್ಮಣ ಭಟ್ಟರದ್ದು ದೊಡ್ಡ ಕುಟುಂಬದಲ್ಲಿ ಜನಿಸಿ ಬೆಳೆದವರು. ಹೈಸ್ಕೂಲ್ ಶಿಕ್ಷಣದ ನಂತರ ಅವರು ಕಲ್ಯಾಣಪುರದಲ್ಲಿ ಶಿಕ್ಷಕವೃತ್ತಿಯನ್ನು ಆರಂಭಿಸಿದರಾದರೂ ಅವರೊಳಗಿದ್ದ ಕಲಾವಿದ ಅವರನ್ನು ಮುಂಬೈಗೆ ಕರೆಯಿಸಿತು.

ಕೆ.ಎಲ್. ಭಟ್ಟರನ್ನು ಮೊದಲು ನೋಡಿದ್ದು ನನ್ನ ಹದಿನಾರರ ವಯಸ್ಸಿನಲ್ಲಿ. ನಾನಾಗ ಚಿತ್ರಕಲೆಯ ಹೈಯರ್ ಗ್ರೇಡ್ ಪರೀಕ್ಷೆಯ ತಯಾರಿಯಲ್ಲಿದ್ದೆ. ಇವರು ಉಡುಪಿಯ ಚಿತ್ರಕಲಾ ಮಂದಿರದಲ್ಲಿ ವಿದ್ಯಾರ್ಥಿಗಳೊಂದಿಗೆ ಒಂದಾಗಿ 'ಸ್ಟಿಲ್‌ಲೈಫ್'ಗೆ ಜೀವ ತುಂಬುತ್ತಿದ್ದರು. ನೋಡಿದ ಮೊದಲ ನೋಟಕ್ಕೇ ಸೂಸುವ ಸಾತ್ವಿಕ ಪ್ರೇಮವೇ ಅವರು ಹೊಂದಿರುವ ಸಾವಿರಾರು ವಿದ್ಯಾರ್ಥಿಗಳ ಕಲಾಬದುಕಿಗೆ ದೀವಿಗೆಯಾಗಿರಬಹುದು.

ಮತ್ತೆ ನನಗವರ ಒಡನಾಟ ದೊರೆತದ್ದು 2002ರಲ್ಲಿ ನನ್ನ ಶಿಕ್ಷಕವೃತ್ತಿ ಆರಂಭಿಸಿದಾಗ. ಬಿಡುವು ಸಿಕ್ಕಾಗಲೆಲ್ಲ ತಮ್ಮ 60ರ ದಶಕದ ಮುಂಬೈನ ಜೆ.ಜೆ. ಕಲಾಶಾಲೆಯ ಅನುಭವಗಳನ್ನು ಉಡುಪಿ ಸಿಟಿ ಬಸ್‌ಸ್ಟ್ಯಾಂಡ್ ಎದುರಿನ ಟೀ ಹೋಟೆಲ್‌ನಲ್ಲಿ ಸ್ವಾರಸ್ಯಕರವಾಗಿ ಬಿಚ್ಚಿಡುತ್ತಿದ್ದರು. ಭಟ್ಟರು ಅಧ್ಯಯನದ ಸಂದರ್ಭದಲ್ಲಿ ಚಿತ್ರಿಸಿದ್ದ ನೂರಾರು ಚಿಕ್ಕ ಚಿಕ್ಕ ಚಿತ್ರಗಳು ಅವರ ಸಂಯೋಜನಾ ತಂತ್ರ, ಕುಶಲತೆ, ವೈವಿಧ್ಯಗಳಿಂದಾಗಿ ಬೆರಗು ಮೂಡಿಸಿದ್ದವು. 'ಕಲಾಗುರು' ಎಂದೇ ಖ್ಯಾತರಾಗಿದ್ದ ದಂಡಾವತಿ ಮಠರು ಲಕ್ಷ್ಮಣ ಭಟ್ಟರ ಜೆ.ಜೆ. ಕಲಾಶಾಲೆಯ ಅಧ್ಯಯನ ಮುಗಿಯುತ್ತಿದ್ದಂತೆಯೇ, ತಮ್ಮ ನೂತನ ಕಲಾಮಂದಿರಕ್ಕೆ ಗುರುವನ್ನಾಗಿ ನೇಮಿಸಿದರು. ಆ ಸಂದರ್ಭದಲ್ಲಿ ಅಲಮೇಲಕರರ ಹತ್ತಿರದ ಒಡನಾಡಿಯಾಗಿದ್ದ ಭಟ್ಟರಿಗೆ ಕೆ.ಕೆ. ಹೆಬ್ಬಾರರ ಪ್ರೀತಿ, ಮಾರ್ಗದರ್ಶನ ದೊರಕಿತು.

ಉಡುಪಿ ಭಾಗದ ಕಲಾರ್ಥಿಗಳ ಸುಕೃತವೋ ಮತ್ತೇನೋ, 12 ವರ್ಷಗಳ ಮುಂಬೈ ಬದುಕಿನ ನಂತರ ಮುಂದೆ ಭಟ್ಟರ ಜೀವನ ತೆರೆದುಕೊಂಡಿದ್ದು ಉಡುಪಿಯ 'ಚಿತ್ರಕಲಾ ಮಂದಿರ'ದಲ್ಲಿ. ಪ್ರಮೀಳಾ ಚೋಳಯ್ಯನವರು ಆರಂಭಿಸಿದ ಕಲಾಶಾಲೆಗೆ ಅವರ ಮಾರ್ಗದರ್ಶನದ ಅಗತ್ಯವಿತ್ತೇನೋ? ಮುಂದೆ ಜೀವನ ಪೂರ್ತಿ ಕಲಾಶಾಲೆ ಮತ್ತು ವಿದ್ಯಾರ್ಥಿಗಳೇ ತಮ್ಮ ಕ್ಯಾನ್ವಾಸ್ ಮತ್ತು ಬಣ್ಣ ಎಂಬಂತೆ ಇದ್ದರು. ಎಷ್ಟೋ ಜನ ಕಲಾವಿದರು ಏಕಾಂತದಲ್ಲಿ ಕೃತಿ ರಚಿಸಬಲ್ಲರು. ಆದರೆ ಸಂಯೋಜನಾ ತತ್ವಗಳು, ವಿಧಾನ, ಮಾಧ್ಯಮಗಳ ಸಾಧ್ಯತೆಗಳು ಇತ್ಯಾದಿಗಳನ್ನು ಶಾಬ್ದಿಕ ಮತ್ತು ದೃಶ್ಯಿಕವಾಗಿ ತೋರಿಸಿ, ತಪ್ಪನ್ನು ತಿದ್ದಿ ಓರಣಗೊಳಿಸುವವರು ವಿರಳ. ಅಂತಹುದರಲ್ಲಿ ಕರ್ನಾಟಕದಾದ್ಯಂತ ಇದ್ದ